<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC/ST. No.09-2020

ದೋ.ಸಾ. 28
ಫ್ರಾ.ಸಾ. 15
ಪ್ರ.ವ.ಬೊ.ದಿನಾಂಕ. 18-06-2026

| | | |
|---|---|---|
| ಹೆಸರು | - | ಯು.ನಾಗೇಶ್ ಐತಾಳ್ |
| ತಂದೆ / ಗಂಡನ ಹೆಸರು | - | ದಿಃ ನರಸಿಂಹ ಐತಾಳ್ |
| ವಯಸ್ಸು | - | 63 ವರ್ಷ |
| ಉದ್ಯೋಗ | - | ನಿವೃತ್ತ ಪೋಲೀಸ್ ಅಧೀಕ್ಷಕರು |
| ವಾಸ ಸ್ಥಳ | - | ಹರಿಹರ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು ದಾವಣಗೆರೆ ನಗರ ಉಪವಿಭಾಗದಲ್ಲಿ ಪೋಲೀಸ್ ಉಪಾಧೀಕ್ಷಕನಾಗಿ ದಿಃ 05-11-2019 ರಿಂದ 15-10-2021 ರವರೆಗೆ ಕೆಲಸ ಮಾಡಿದ್ದೇನೆ.

2. ಈ ಪ್ರಕರಣದ ಕಡತವನ್ನು ಚಾ.ಸಾ.27 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಲು ಮಾನ್ಯ ಪೋಲೀಸ್ ಅಧೀಕ್ಷಕರಿಂದ ಈಗ ತೋರಿಸಿದ ಆದೇಶದ ಪ್ರಕಾರ ಪಡೆದುಕೊಂಡೆನು. ಸದರಿ ಆದೇಶವನ್ನು ನಿ.ಪಿ.54 ಎಂದು ಗುರುತಿಸಲಾಯಿತು. ಅದನ್ನು ಪಡೆದುಕೊಂಡ ಬಗ್ಗೆ ನನ್ನ ಸಹಿ ಇದ್ದು, ಅದನ್ನು ನಿ.ಪಿ.54(ಎ) ಎಂದು ಗುರುತಿಸಲಾಯಿತು.

3. ನಾನು ಪಿರ್ಯಾದಿಯ ಮೊಬೈಲ್ ನಂಬರ್ 9448053663 ಹಾಗೂ ಆರೋಪಿಯ ಸ್ನೇಹಿತರ ಮೊಬೈಲ್ ನಂ.9986259669 ಇದರ ಸಿಡಿಆರ್ ಗಳ ಮಾಹಿತಿ ನೀಡಲು ಎಸ್ ಪಿ ಸಾಹೇಬರಿಗೆ ಮನವಿ ಪತ್ರ ಬರೆದೆನು.

4. ದಿಃ 14-11-2019 ರಂದು ತಹಶೀಲ್ದಾರ್ ದಾವಣಗೆರೆ ಅವರಿಗೆ ಸ್ಥಳ ಪಂಚನಾಮೆ ಕುರಿತಾಗಿ ಪಂಚರನ್ನು ಒದಗಿಸಲು ಸಿಬ್ಬಂದಿಯನ್ನು ಕಳುಹಿಸಲು ಕೋರಿದೆನು. ಈಗ ನೋಡುತ್ತಿರುವ ಮನವಿ ನಾನು ತಹಶೀಲ್ದಾರರಿಗೆ ನೀಡಿದ್ದು, ಅದನ್ನು ನಿ.ಪಿ.55 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.55(ಎ) ಎಂದು ಗುರುತಿಸಲಾಯಿತು.

5. ನಂತರ ತಹಶೀಲ್ದಾರರು ಚಾ.ಸಾ.7 ಮತ್ತು 8 ರವರನ್ನು ನೇಮಕ ಮಾಡಿದ್ದು, ಅವರಿಗೆ ನಾನು ನಿ.ಪಿ.20 ಮತ್ತು 21 ರಂತೆ ನೋಟೀಸು ಜಾರಿ ಮಾಡಿ, ನಿ.ಪಿ.4 ರಂತೆ ಪಂಚನಾಮೆ ಮಾಡಿರುತ್ತೇನೆ. ಈಗ ನೋಡುತ್ತಿರುವ ಪಂಚನಾಮೆ ನಾನು ಮಾಡಿದ್ದು, ಅದರಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಇ) ಎಂದು ಗುರುತಿಸಲಾಯಿತು. ಹಾಗೂ ನಿ.ಪಿ.5 ರಂತೆ ಚಾ.ಸಾ.20 ರವರಿಂದ ಪೋಟೋ ತೆಗೆಸಿರುತ್ತೇನೆ.

6. ನಂತರ ಸಾಕ್ಷಿದಾರರಾದ ಚಾ.ಸಾ.2, 3, 5, 6 ಹಾಗೂ ಚಾ.ಸಾ.7 ಮತ್ತು 8 ಇವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

7. ದಿಃ 18-11-2019 ರಂದು ಆರೋಪಿ ಬಳಸಿದ ಅವರ ಸ್ನೇಹಿತರಾದ ಚಾ.ಸಾ.11 ರವರ ಮೊಬೈಲ್ ಅನ್ನು ಹಾಜರುಪಡಿಸುವಂತೆ ನಿ.ಪಿ.46 ರಂತೆ ಜ್ಞಾಪನ ನೀಡಿರುತ್ತೇನೆ.

8. ದಿಃ 25-11-2019 ರಂದು ಪಿರ್ಯಾದಿಯವರಿಗೆ ಸಿಸಿ ಟಿವಿ ಫೂಟೇಜ್ ಹಾಜರುಮಾಡಲು ಕಲಂ.91 ಸಿಆರ್ ಪಿಸಿ ಅಡಿಯಲ್ಲಿ ನೋಟೀಸ್ ಜಾರಿ ಮಾಡಿದೆನು. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿ.ಪಿ.12 ಎಂದು ಈಗಾಗಲೇ ಗುರುತಿಸಲಾಗಿದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು.

9. ದಿಃ 26-11-2019 ರಂದು ಆರೋಪಿಗೆ ವಿಚಾರಣೆಗೆ ಹಾಜರಾಗಲು ಕಲಂ.41(ಎ) ಸಿಆರ್ ಪಿಸಿ ಅಡಿಯಲ್ಲಿ ನೋಟೀಸ್ ಜಾರಿ ಮಾಡಿದೆನು. ಅದೇ ದಿನ ಆರೋಪಿಯ ಸ್ನೇಹಿತ ಚಾ.ಸಾ.11 ರವರು ಠಾಣೆಗೆ ಹಾಜರಾಗಿ ಮೊಬೈಲ್ ಹಾಜರು ಮಾಡಿದ್ದು, ಅದಕ್ಕೆ ಚಾ.ಸಾ.9 ಮತ್ತು 10 ರವರನ್ನು ಪಂಚರಾಗಿ ಕಳುಹಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಮುಖಾಂತರ ನಿವೇದಿಸಿಕೊಂಡಿದ್ದೆನು. ಚಾ.ಸಾ.10 ರವರಿಗೆ ನಿ.ಪಿ.23 ರಂತೆ ಹಾಗೂ ಚಾ.ಸಾ.9 ರವರಿಗೆ ನಿ.ಪಿ.22 ರಂತೆ ನೋಟೀಸು ಜಾರಿ ಮಾಡಿರುತ್ತೇನೆ. ನಿ.ಪಿ.20 ಮತ್ತು 23 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.20(ಬಿ) ದಿಂದ 23(ಬಿ) ಎಂದು ಗುರುತಿಸಲಾಯಿತು.

10. ದಿಃ 26-11-2019 ರಂದು ಚಾ.ಸಾ.11 ರವರು ಹಾಜರುಪಡಿಸಿದ ಸ್ಯಾಮ್ ಸಂಗ್ ಮೊಬೈಲ್ ಅನ್ನು ಠಾಣೆಯಲ್ಲಿ ಜಪ್ತುಪಡಿಸಿಕೊಂಡೆನು. ಹಾಗೂ ಮೊಬೈಲ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದೆನು. ಈ ವಿಚಾರವಾಗಿ ನಿ.ಪಿ.24 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಬಿ) ಎಂದು ಗುರುತಿಸಲಾಯಿತು. ಈ ಕುರಿತಾಗಿ ಫೋಟೋ ನೋಡಿದ್ದು, ಅದನ್ನು ನಿ.ಪಿ.56 ಎಂದು ಗುರುತಿಸಲಾಯಿತು. ಸದರಿ ಮೊಬೈಲ್ ಅನ್ನು ಪಿಎಫ್ ಸಂಖ್ಯೆ 103/2019 ರಲ್ಲಿ ಅಳವಡಿಸಿಕೊಂಡೆನು.

11. ನಂತರ ಅದೇ ದಿನ ಸದರಿ ಪಂಚರೊಂದಿಗೆ ಪಿರ್ಯಾದಿ ಮಗ ವಿನಯ್ ಹಾಜರಾಗಿ ಸಿಸಿ ಟಿವಿ ಫೂಟೇಜ್ ಹಾಜರುಮಾಡಿ ಅದರಲ್ಲಿ ಕ್ಯಾಮರಾ 3 ರಲ್ಲಿ ಘಟನೆಗೆ ಕುರಿತಾದ ದೃಶ್ಯಾವಳಿಗಳು ಕಂಡುಬರುತ್ತಿವೆ ಎಂದು ಹೇಳಿದ್ದರಿಂದ ಚಾ.ಸಾ.13 ರವರನ್ನು ಬರಮಾಡಿಕೊಂಡು ಅದನ್ನು ಪರಿಶೀಲಿಸಲಾಗಿ ಸದರಿ ಸಿಸಿ ಕ್ಯಾಮರಾದಲ್ಲಿ ಸಮಯವು 41 ನಿಮಿಷ ಮುಂದಿರುತ್ತದೆ ಎಂದು ಕಂಡುಬಂದಿರುತ್ತದೆ. ಅದರಲ್ಲಿ ಆರೋಪಿಯು ದಿಃ 12-11-2019 ರಂದು ಬೆಳಿಗ್ಗೆ 11-38 ನಿಮಿಷದಿಂದ 11-46 ರವರೆಗೆ ಚಾ.ಸಾ.1 ರವರ ಮನೆಯ ಕಡೆಗೆ ಸನ್ನೆ ಮಾಡಿದ್ದು ಕಂಡುಬರುತ್ತದೆ. ಆ ಸಿಸಿ ಟಿವಿಯ ದೃಶ್ಯಾವಳಿಗಳನ್ನು ನಿ.ಪಿ.19 ರಲ್ಲಿ ಕಾಪಿ ಮಾಡಿರುತ್ತೇನೆ.

12. ಪೆನ್ ಡ್ರೈವ್ ಅನ್ನು ಸಹ ಪಂಚರ ಸಮಕ್ಷಮ ಅಮಾನತುಪಡಿಸಿಕೊಂಡಿರುತ್ತೇನೆ. ಈಗ ಸದರಿ ಪೆನ್ ಡ್ರೈವ್ ಅನ್ನು ಕೋರ್ಟನಲ್ಲಿ ಪ್ಲೇ ಮಾಡಲಾಯಿತು. ಅದರಲ್ಲಿ ಫೈಲ್ cam3_12-11-2019__11-00-00_11-59-59__CAM3.avi ಅನ್ನು ಹಚ್ಚಲಾಗಿ ಅದರಲ್ಲಿ 45 ನಿಮಿಷ ನಂತರ ಆರೋಪಿ ಬಂದಿದ್ದಾನೆ ಎಂದು ಸಾಕ್ಷಿಯು ಗುರುತಿಸುತ್ತಾರೆ. ಆರೋಪಿಯು ಬಿಳಿ ಡ್ರೆಸ್ ಹಾಗೂ ಕೇಸರಿ ಶಾಲು ಹಾಕಿಕೊಂಡವನು ಇರುತ್ತಾನೆ ಎನ್ನುತ್ತಾರೆ.

ನಿ.ಪಿ.13 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿ.ಪಿ.13(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿ.ಪಿ.14 ರಿಂದ 16 ರಂತೆ ಫೋಟೋ ಸಹ ತೆಗೆಸಿರುತ್ತೇನೆ. ಸದರಿ ಪೆನ್ ಡ್ರೈವ್ ಅನ್ನು ಪಿಎಫ್ ನಂ.104/2019 ರಂತೆ ಅಳವಡಿಸಿಕೊಂಡಿರುತ್ತೇನೆ.

13. ಅದೇ ದಿನ ಪಂಚರಾದ ಪ್ರಕಾಶ್ ಮತ್ತು ಕುಮಾರ್ ಸ್ವಾಮಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಹಾಗೂ ಚಾ.ಸಾ.13 ರವರಿಂದ ನಿ.ಪಿ.25 ರಂತೆ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ನಿಪಿ.25 ಪಡೆದುಕೊಂಡ ಬಗ್ಗೆ ನನ್ನ ಸಹಿ ಇದ್ದು, ಅದನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ಚಾ.ಸಾ.12 ರವರ ಹೇಳಿಕೆಯನ್ನು ಅದೇ ದಿನ ಪಡೆದುಕೊಂಡಿರುತ್ತೇನೆ. ಅವರಿಂದ ನಿ.ಪಿ.31 ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.31 ಕ್ಕೆ ನನ್ನ ಸಹಿ ಇದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.31(ಎ) ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳದ ನಕಾಶೆ ನಿ.ಪಿ.38 ನ್ನು ಪಡೆದುಕೊಂಡಿರುತ್ತೇನೆ. ಈ ಕುರಿತಾಗಿ ನಿ.ಪಿ.39 ರಂತೆ ಅವರು ಪತ್ರ ನೀಡಿರುತ್ತಾರೆ.

14. ದಿಃ 27-11-2019 ರಂದು ಬಿಇಒ ದಾವಣಗೆರೆ ಇವರಿಗೆ ಪಂಚರನ್ನು ಕಳುಹಿಸಲು ಮನವಿ ಪತ್ರ ಸಲ್ಲಿಸಿದ್ದು, ಆ ಪ್ರಕಾರ ಅವರು ಚಾ,ಸಾ.14 ಮತ್ತು 15 ರವರನ್ನು ಕಳುಹಿಸಿರುತ್ತಾರೆ. ಅವರಿಗೆ ನಿ.ಪಿ.32 ಮತ್ತು 33 ರಂತೆ ನೋಟೀಸು ಜಾರಿ ಮಾಡಿರುತ್ತೇನೆ. ಆ ನೋಟೀಸ್ ಗಳಲ್ಲಿ ನನ್ನ ಸಹಿ ಇದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.32(ಬಿ) ಮತ್ತು 33(ಬಿ) ಎಂದು ಗುರುತಿಸಲಾಯಿತು.

15. ಪಿರ್ಯಾದಿ ಕಛೇರಿಗೆ ಹಾಜರಾಗಿ ಪಂಚರ ಸಮಕ್ಷಮ ತಮ್ಮ ಮೊಬೈಲ್ ಸಂಖ್ಯೆ 9448053663 ಆ ನಂಬರ್ ಗೆ ಆರೋಪಿಯು ಆರೋಪಿಯ ಸ್ನೇಹಿತನ ಮೊಬೈಲ್ ಸಂಖೆ 9986259669 ನಂಬರ್ ನಿಂದ ದಿಃ 12-11-2019 ರಂದು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದ ಬಗ್ಗೆ ಪಿರ್ಯಾದಿಯ ಮಗ ವಿನಯ್ ಅದನ್ನು ತೆಗೆದು ತೋರಿಸಿದನು.

16. ಅದರಲ್ಲಿರುವ ಕಾಲ್ ರೆಕಾರ್ಡನ್ನು ಪ್ಲೇ ಮಾಡಿ ಸದರಿ ಮಾತುಕತೆಯನ್ನು ಪೆನ್ ಡ್ರೈವ್ ನಲ್ಲಿ ಹಾಕಿವಿಕೊಂಡೆನು. ಆ ಪೆನ್ ಡ್ರೈವ್ ಇಲ್ಲಿ ಹಾಜರುಮಾಡಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಗಿದೆ. ಆರೋಪಿಯು ಪಿರ್ಯಾದಿಗೆ ಬೋಳಿಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು ಮತ್ತು ಬೆದರಿಕೆ ಹಾಕಿದ್ದು ಕಂಡುಬರುತ್ತದೆ. ಸದರಿ ಪೆನ್ ಡ್ರೈವ್ ಅನ್ನು ಕಂಪ್ಯೂಟರ್ ನಲ್ಲಿ ಪಂಚರ ಸಮಕ್ಷಮ ಪ್ಲೇ ಮಾಡಿದಾಗ ನಿ.ಪಿ.6 ರಲ್ಲಿ ಕಾಣಿಸಿದ ಮಾತುಕತೆ ಕಂಡುಬಂದಿರುತ್ತದೆ. ನಿ.ಪಿ.10 ನ್ನು ನಿ.ಪಿ.6 ರಂತೆ ಪಂಚನಾಮೆ ಮಾಡಿ ಜಪ್ತುಮಾಡಿಕೊಂಡಿರುತ್ತೇನೆ. ನಿ.ಪಿ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಇ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿ.ಪಿ.8 ಮತ್ತು 9 ರಂತೆ ಫೋಟೋ ತೆಗೆಸಿರುತ್ತೇನೆ. ವಶಪಡಿಸಿಕೊಂಡ ಪೆನ್ ಡ್ರೈವ್ ಅನ್ನು ಪಿಎಫ್ ನಂ.105/2019 ರಂತೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಹಾಗೂ ಪಂಚರ ಹೇಳಿಕೆಗಳನ್ನು ನಮೂದುಮಾಡಿಕೊಂಡಿರುತ್ತೇನೆ. ನಿ.ಪಿ.7 ಮತ್ತು 18 ರಂತೆ ವಿನಯ್ ಹಾಗೂ ರಾಮಪ್ಪ ಅವರ ಕಡೆಯಿಂದ 65 ಬಿ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ.

17. ದಿಃ 02-12-2019 ರಂದು ಪಿಎಫ್ ಸಂಖ್ಯೆ 103/2019 ರಲ್ಲಿ ವಶಪಡಿಸಿಕೊಂಡ ಮಾಲುಗಳನ್ನು ಬೆಂಗಳೂರು ಎಫ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಈಗ ನೋಡಿರುವಂತೆ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಅದು ನಿ.ಪಿ.57 ಆಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.57(ಎ) ಎಂದು ಗುರುತಿಸಲಾಯಿತು.

18. ಆರೋಪಿಯು ಬಡಾವಣೆ ಠಾಣೆಯ ಗುನ್ನೆ ನಂ.66/2019 ರಲ್ಲಿ ಶಾಮಿಲಾಗಿದ್ದು, ಅದರಲ್ಲಿ ಶರಣಾಗಿ ಬಂಧನದಲ್ಲಿದ್ದ ಕಾರಣ ಆತನ ವಿರುದ್ಧ ಬಾಡಿ ವಾರಂಟ್ ಪಡೆದುಕೊಂಡಿರುತ್ತೇನೆ. ದಿಃ 09-12-2019 ರಂದು ನೋಡಲ್ ಆಫೀಸರ್ ಬಿ ಎಸ್ ಎನ್ ಎಲ್ ಬೆಂಗಳೂರು ಅವರಿಗೆ ಸಿಡಿಆರ್ ವರದಿ ಒದಗಿಸುವ ಬಗ್ಗೆ ಹಾಗೂ 65 ಬಿ ಒದಗಿಸುವ ಬಗ್ಗೆ ಮನವಿ ಪತ್ರ ಸಲ್ಲಿಸಿರುತ್ತೇನೆ.

19. ದಿಃ 13-12-2019 ರಂದು ಪಿರ್ಯಾದಿ ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಅವುಗಳು ಈಗಾಗಲೇ ನಿ.ಪಿ.40 ಮತ್ತು 41 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿ ಪಿರ್ಯಾದಿಯು ಬೋವಿ ಜಾತಿಗೆ ಸೇರಿದವನಾಗಿರುತ್ತಾನೆ ಎಂದು ಹಾಗೂ ಆರೋಪಿಯು ಲಿಂಗಾಯತ ಜಾತಿಗೆ ಸೇರಿರುವುದು ಕಂಡುಬಂದಿರುತ್ತದೆ.

20. ದಿಃ 16-12-2019 ರಂದು ನ್ಯಾಯಾಲಯದ ಅನುಮತಿ ಮುಖಾಂತರ ಆರೋಪಿಯ ಧ್ವನಿ ಮಾದರಿ ಪಡೆಯಲು ಆದೇಶ ಪಡೆದುಕೊಂಡೆನು. ದಿಃ 31-12-2019 ರಂದು ವಾಯಿಸ್ ಸ್ಯಾಂಪಲ್ ಕೊಡಲು ಠಾಣೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಿದೆನು. ಧ್ವನಿ ಪರೀಕ್ಷೆ ಪಡೆಯಲು ಪಂಚರನ್ನಾಗಿ ಕಳುಹಿಸಲು ಜಿಲ್ಲಾ ಶಿಕ್ಷಣ ತರಭೇತಿ ಉಪನಿರ್ದೇಶಕರಿಗೆ ಮನವಿ ಕಳುಹಿಸಿದೆನು. ಅವರು ಚಾ.ಸಾ.16 ಮತ್ತು 17 ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಅವರಿಗೆ ನಿ.ಪಿ.35 ರಿಂದ 37 ರಂತೆ ನೋಟೀಸ್ ಜಾರಿ ಮಾಡಿದೆನು. ಹಾಗೂ ಪಂಚನಾಮೆಯನ್ನು ನಿ.ಪಿ.34 ರಂತೆ ಮಾಡಿದೆನು. ನಿ.ಪಿ.34 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.34(ಡಿ) ಎಂದು ಗುರುತಿಸಲಾಯಿತು.

21. ಘಟನೆ ನಡೆದ ದಿನ ಆರೋಪಿಯು ಪಿರ್ಯಾದಿಗೆ ಬೈದ ಸಂಗತಿಯ ದೃಶ್ಯಾವಳಿಗಳನ್ನು ನೋಡಿ ಅವುಗಳನ್ನು ಟೈಪ್ ಮಾಡಿ ಆರೋಪಿಗೆ ಓದಲು ತಿಳಿಸಿದೆನು. ಅದನ್ನು ಆರೋಪಿ ಓದಿ ಹೇಳಿದ್ದು, ಅದನ್ನು ನಾವು ನಮ್ಮ ಸಿಬ್ಬಂದಿಯವರ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡು ನಂತರ ಅದನ್ನು ಸ್ಯಾನ್ ಡಿಸ್ಕ್ ಪೆನ್ ಡ್ರೈವ್ ನಲ್ಲಿ ಕಾಪಿ ಮಾಡಿರುತ್ತೇವೆ. ಆ ಕಾಲಕ್ಕೆ ನಿ.ಪಿ.34 ರಂತೆ ಪಂಚನಾಮೆ ಮಾಡಿರುತ್ತೇವೆ. ಹಾಗೂ ಈ ಕುರಿತಾಗಿ ನಿಪಿ.35 ಹಾಗೂ 36 ರಂತೆ ಪೋಟೋ ತೆಗೆಸಿರುತ್ತೇನೆ. ಪೆನ್ ಡ್ರೈವ್ ಅಮಾನತುಪಡಿಸಿಕೊಂಡ ಬಗ್ಗೆ ಪಿಎಫ್ 1/2020 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಮತ್ತು ಪಂಚರಾದ ಬಸವರಾಜ್ ಹಾಗೂ ಮಂಜುನಾಥ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡ ಚಾ.ಸಾ.18 ರವರ ಹೇಳಿಕೆ ಹಾಗೂ ಅವರಿಂದ 65 ಬಿ ಪ್ರಮಾಣ ಪತ್ರ ನಿ.ಪಿ.44 ರಂತೆ ಪಡೆದುಕೊಂಡಿರುತ್ತೇನೆ. ಹಾಗೂ ಮಂಜುನಾಥ ಅವರ ಸಿಐ ಎಫ್ ಹಾಗೂ ಅವರ ಗುರುತಿನ ಚೀಟಿ ಪಡೆದುಕೊಂಡಿರುತ್ತೇನೆ. ಅವುಗಳು ನಿ.ಪಿ.26 ಮತ್ತು 27 ಆಗಿರುತ್ತವೆ. ಚಾ.ಸಾ.11 ಮಂಜುನಾಥ ಅವರು ನಿ.ಪಿ.29 ರ ಜೆರಾಕ್ಸ್ ಪ್ರತಿಯನ್ನು ಮೊಬೈಲ್ ಖರೀದಿ ಮಾಡಿದ ಬಗ್ಗೆ ನನಗೆ ನೀಡಿರುತ್ತಾರೆ.

22. ದಿಃ 04-01-2020 ರಂದು ನೋಡಲ್ ಆಫೀಸರ್ ಓಡಫೋನ್ ಇವರಿಗೆ 65 ಬಿ ಕೊಡಲು ಮನವಿ ಪತ್ರ ಸಲ್ಲಿಸಿದೆನು. ಹಾಗೂ ಅವರು ಅದನ್ನು ನಿ.ಪಿ.48 ರಂತೆ ಸರ್ಟಿಫಿಕೇಟ್ ಹಾಗುಾ ನಿ.ಪಿ.49 ರಂತೆ ಸಿಡಿಆರ್ ಗಳನ್ನು ಕೊಟ್ಟಿರುತ್ತಾರೆ. ಅವುಗಳನ್ನು ಪಡೆದುಕೊಂಡಿದ್ದಕ್ಕೆ ನನ್ನ ಸಹ ಇದ್ದು ಆ ಸಹಿಗಳನ್ನು ನಿ.ಪಿ.48(ಎ) ಎಂದು ಗುರುತಿಸಲಾಯಿತು. ನಿ.ಪಿ.49 ರಲ್ಲಿ ಆರೋಪಿ ದಿಃ 12-11-2019 ರಂದು ರಾತ್ರಿ 8-30 ಕ್ಕೆ ಪಿರ್ಯಾದಿದಾರರಿಗೆ ಮಾತನಾಡಿರುತ್ತಾರೆ. ಅದು ಸುಮಾರು 200 ಸೆಕೆಂಡ್ ಗಳ ಕಾಲ ಮಾತನಾಡಿರುತ್ತಾರೆ. ಅದನ್ನು ನಿ.ಪಿ.49(ಎ) ಎಂದು ಗುರುತಿಸಲಾಯಿತು.

23. ದಿಃ 07-01-2020 ರಂದು ಪಿಎಪ್ ನಂ.01/2020 ರಲ್ಲಿ ವಶಪಡಿಸಿಕೊಂಡು ವಸ್ತುಗಳನ್ನು ಎಪ್ ಎಸ್ ಎಲ್ ಗೆ ಕಳುಹಿಸಿರುತ್ತೇನೆ. ಅದೇ ದಿನ ಲಂಬಾಣಿ ಗಿರಿಧರ್ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಮಂಜುನಾಥ ಅವರಿಂದ ಹೇಳಿಕೆ ಹಾಗೂ ಅವರ ಕಡೆಯಿಂದ ನಿ.ಪಿ.43 ರಂತೆ 65 ಬಿ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ.

24. ಚಂದ್ರಶೇಖರ್ ಅವರಿಂದ ಹೇಳಿಕೆ ಮತ್ತು 65 ಬಿ ಪ್ರಮಾಣ ಪತ್ರವನ್ನು ನಿ.ಪಿ.42 ರಂತೆ ಪಡೆದುಕೊಂಡಿರುತ್ತೇನೆ.

25. ಆರೋಪಿಯ ವಿರುದ್ದ. ತನಿಖೆ ಪೂರೈಸಿ ಎಪ್ ಎಸ್ ಎಲ್ ವರದಿ ಬಾಕಿ ಇರಿಸಿ ಮಧ್ಯಂತರ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಂತರ ದಿಃ 04-02-2020 ರಂದು ಮೊಬೈಲ್ ಪೋನ್ ನ ವಿಶ್ಲೇಷಣಾ ವರದಿ ಬಂದಿದ್ದು, ಅದನ್ನು ಪಡೆದುಕೊಂಡು ದಿಃ 05-02-2020 ರಂದು ಅದನ್ನು ಸಾಕ್ಷಿಯೆಂದು ಪರಿಗಣಿಸಲು ಕೋರಿ ನ್ಯಾಯಾಲಯಕ್ಕೆ ಹೆಚ್ಚುವರಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

26. ದಿಃ 05-06-2020 ಕ್ಕೆ ಆರೋಪಿಯ ಧ್ವನಿ ಪರೀಕ್ಷಾ ವರದಿ ಬಂದಿದ್ದು, ಆರೋಪಿಯ ಧ್ವನಿ ತಾಳೆಯಾಗಿರುತ್ತದೆ. ನಂತರ ದಿಃ 10-06-2020 ರಂದು ಎಪ್ ಎಸ್ ಎಲ್ ಅಧಿಕಾರಿಗಳನ್ನು ಸಾಕ್ಷಿಗಳಾಗಿ ಪರಿಗಣಿಸಲು ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ವರದಿಗಳು ಈಗಾಗಲೇ ನಿ.ಪಿ.50 ರಿಂದ 53 ಎಂದು ಗುರುತಿಸಲಾಗಿದೆ. ನಾನು ಆರೋಪಿಯನ್ನು ತೋರಿಸಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಕೆಎನ್ ಉಮಾ ವಕೀಲರಿಂದ.**

27. ಈ ಪ್ರಕರಣದಲ್ಲಿ ಪಿರ್ಯಾದಿದಾರರು ತಡವಾಗಿ ಪಿರ್ಯಾದಿಯನ್ನು ನೀಡಿದ್ದಾರೆ ಎಂಬುದು ನಿಜ. ಪಿರ್ಯಾದಿಯು ಕಾಂಗ್ರೇಸ್ ಪಕ್ಷಕ್ಕೆ ಸೇರಿದ್ದಾರೆ ಎಂಬುದು ನಿಜ. ಹಾಗುಾ ಆರೋಪಿಯು ಬಿಜೆಪಿ ಪಕ್ಷಕ್ಕೆ ಸೇರಿದ್ದಾರೆ ಎಂಬುದು ನಿಜ. ಇದೇ ನ್ಯಾಯಾಲಯದಲ್ಲಿ ಪಿರ್ಯಾದಿದಾರರು ಕ್ರೈ ನಂ. 66/2019 ಎಂದು 25 ಜನರ ವಿರುದ್ಧ ಎಸ್ ಸಿ ಎಸ್ ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಸಲ್ಲಿಸಿದ್ದಾರೆ ಎಂಬುದು ನಿಜ. ನಿ.ಪಿ.6 ರ ಪ್ರಕಾರ ನಾನು ಘಟನೆ ನಡೆದಿದೆ ಎನ್ನಲಾದ 15 ದಿನಗಳ ನಂತರ ಪಿರ್ಯಾದಿಯ ಮೊಬೈಲ್ ಪೋನನ್ನು ಪರಿಶೀಲಿಸಿರುತ್ತೇನೆ.

28. ನಾನು ಪಿರ್ಯಾದುದಾರರ ಮೊಬೈಲ್ ಅನ್ನು ಪರಿಶೀಲಿಸಿದಾಗ ಅವರಲ್ಲಿ ಆಟೋ ರೆಕಾರ್ಡಿಂಗ್ ಇತ್ತ ಅಥವಾ ಅವರು ಯಾವುದಾದರೂ ಆ ರೀತಿಯ ಆ್ಯಪ್ ಡೌನ್ ಲೋಡ್ ಮಾಡಿಕೊಂಡಿದ್ದರಾ ಎಂದು ಕೇಳಿದರೆ ಸಾಕ್ಷಿಯು ನಿ.ಪಿ.6 ನೋಡಿ ಎರಡನೇ ಪುಟದಲ್ಲಿ ಮೊದಲನೇ ಪ್ಯಾರಾದಲ್ಲಿ ಇದೆ ಎನ್ನುತ್ತಾರೆ. ಅದನ್ನು

ನೋಡಲಾಗಿ ಅದರಲ್ಲಿ ಡೀಟೆಲ್ಸ್ ನ ಸ್ಕ್ರೀನ್ ಶಾಟ್ ತೆಗೆದುಕೊಂಡಿರುತ್ತಾರೆ ಎಂದು ಇರುತ್ತದೆ. ಅದಕ್ಕೆ ಸಾಕ್ಷಿಯು ಆ ಕುರಿತಾಗಿ ಪಿಎಪ್ ನಲ್ಲಿ ನಮೂದಿಸಿರುತ್ತೇನೆ ಎನ್ನುತ್ತಾರೆ.

29. ನಾನು ಸ್ಥಳ ಪಂಚನಾಮೆಯನ್ನು ಕಂಪ್ಲೆಂಟ್ ಕೊಟ್ಟ ಎರಡು ದಿನದ ನಂತರ ಮಾಡಿರುತ್ತೇನೆ ಎಂಬುದು ನಿಜ. (ನಿ.ಪಿ.4). ನಿ.ಪಿ.4 ರ ಮೊದಲನೇ ಪ್ಯಾರಾದಲ್ಲಿ ಮನೆ ನಂಬರ್ ಮೇಲೆ ತಿದ್ದಿ ಬರೆಯಲಾಗಿದೆ ಎಂಬುದು ನಿಜ. ಸದರಿ ಬರೆದ ನಂಬರ್ ಪಿರ್ಯಾದಿದಾರರ ಮನೆಯದು ಅಲ್ಲ ಎಂಬುದು ನಿಜ. ಸದರಿ ಸ್ಥಳ ಪಿರ್ಯಾದಿಯರ ಮನೆಯ ಮುಂದೆ ಇಲ್ಲ ಎಂದರೆ ಸಾಕ್ಷಿಯು ಪಿರ್ಯಾದಿಯ ಮನೆ ಪಕ್ಕ ಘಟನೆ ನಡೆದಿದೆ ಎನ್ನುತ್ತಾರೆ.

30. ನಿ.ಪಿ.1 ಪಿರ್ಯಾದಿಯಲ್ಲಿ ಪಿರ್ಯಾದಿದಾರರು "ನಮ್ಮ ಮನೆಯ ಮುಂದೆ ಗುಂಪು ಕೂಡಿಕೊಂಡು ನಿಂತು ನನ್ನನ್ನು ಹೆದರಿಸಿ ಕೊಲೆ ಮಾಡಲು ಪ್ರಯತ್ನಿಸಿದನು " ಎಂದು ಇದೆ ಎಂಬುದು ನಿಜ. ನಾನು ಮಾಡಿದ ಸ್ಥಳ ಮಹಜರ್ ಹಾಗೂ ಪಿರ್ಯಾದಿದಾರರು ಬರೆಸಿದ ಸ್ಥಳ ಬೇರೆ ಬೇರೆಯಾಗಿವೆ ಎಂಬುದು ಸುಳ್ಳು. ನಾನು ಪಿರ್ಯಾದಿದಾರರಿಗೆ ಸಹಾಯಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂಬುದು ಸುಳ್ಳು.

31. ನಿ.ಪಿ.24 ರಲ್ಲಿ ನಾನು "ದಿಃ 12-11-2019 ರಂದು ಪ್ರಕರಣದ ಆರೋಪಿಯು ಪಿರ್ಯಾದಿಗೆ ಪೋನ್ ಮಾಡಿದ್ದು----- ಹಾಜರುಪಡಿಸಿದ ಶ್ರೀ ಮಂಜುನಾಥ್ ರವರು ತಿಳಿಸಿರುತ್ತಾರೆ. " ಎಂದು ನಮೂದಿಸಲಾಗಿದೆ ಎಂಬುದು ನಿಜ. ನಾನು ಅಕ್ಕಪಕ್ಕದ ಮನೆಯವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

32. ದಿಃ 12-11-2019 ರಂದು ದಾವಣಗೆರೆ ಕಾರ್ಪೊರೇಶನ್ ನ ಎಲೆಕ್ಷನ್ ನಡೆಯುತ್ತಲಿದ್ದವು. ಆ ಕಾರಣದಿಂದ ಬೂತ್ 100 ಮೀಟರ್ ಒಳಗೆ ಗುಂಪಾಗಿ ಯಾರು ಓಡಾಡಬಾರದು ಎಂಬ ನಿಷೇಧಾಜ್ಞೆ ಇರುತ್ತದೆ ಎಂಬುದು ನಿಜ. ನಿ.ಪಿ.19 ರಲ್ಲಿ ನೋಡಿದಾಗ ಅಲ್ಲಿ ಬೂತ್ ಕಾಣುತ್ತಿದ್ದು, ಕಾರ್ಯಕರ್ತರು ಹಾಗೂ ಪೋಲೀಸರು ಕಾಣುತ್ತಾರೆ ಎಂಬುದು ನಿಜ. ನಿ.ಪಿ.19 ರಲ್ಲಿ cam3_12-11-2019__11-00-00_11-59-59__CAM3.avi ಪೈಲ್ ನಲ್ಲಿ ಆರೋಪಿ ಬಂದ ಎಂದ ನಂತರ ಆತ ಗುಂಪು ಕಟ್ಟಿಕೊಂಡು ಬಂದದ್ದಾಗಲಿ ಅಥವಾ ಪಿರ್ಯಾದಿ ಮನೆಯ ಮುಂದೆ ಕೈತೋರಿಸಿ ಬೈಯ್ಯುವುದಾಗಲಿ ಮಾಡುವುದು ಕಾಣುವುದಿಲ್ಲ ಎಂಬುದು ನಿಜ. ನಾನು ಜಪ್ತು ಮಾಡಿದ ಸಿಸಿ ಟಿವಿ ಪೂಟೇಜ್ ಗಳಲ್ಲಿ ಪಿರ್ಯಾದಿ ಹೇಳಿದಂತೆ ಆರೋಪಿ ಮಾಡಿದ್ದು ಕಾಣುವುದಿಲ್ಲ ಎಂಬುದು ನಿಜ. ನಮ್ಮ ಡಿಪಾರ್ಟ್ ಮೆಂಟ್ ಗೆ ಕ್ಯಾಮರಾ ಕೊಟ್ಟಿರುತ್ತಾರೆ. ನಾನು ಹಾಜರುಪಡಿಸಿದ ಪೋಟೋಗಳು ನಮ್ಮ ಸಿಬ್ಬಂದಿಯವರು ಸ್ವಂತ ಮೊಬೈಲ್ ನಿಂದ ತೆಗೆದ ಪೋಟೋಗಳಾಗಿವೆ ಎಂಬುದು ನಿಜ.

33. ನಾನು ಹಾಜರುಪಡಿಸಿದ ಯಾವುದೇ ಪೋಟೋಗಳಲ್ಲಿ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂಬುದು ನಿಜ. ನಾನು ನಿ.ಪಿ.34 ರ ಪ್ರಕಾರ ಆರೋಪಿಯ ಧ್ವನಿ ಮಾದರಿ ಪಡೆದುಕೊಳ್ಳಲು ರಿಕಾರ್ಡ್ ಆದ ವಿಚಾರವನ್ನು ಟೈಪ್ ಮಾಡಿಸಿ ಓದಿಸಿದಾಗ ಅದರಲ್ಲಿ ಜಾತಿ ನಿಂದನೆಯ ಯಾವುದೇ ಶಬ್ದ ಬಂದಿಲ್ಲ ಎಂಬುದು

ನಿಜ. ಆರೋಪಿಯ ತರನೇ ಇನ್ನೊಬ್ಬರು ಮಾತನಾಡಿರಬಹುದು ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ.

34. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಅನ್ನುವುದು ಸುಳ್ಳು. ನಾನು ಸುಳ್ಳು ಪಂಚನಾಮೆಗಳನ್ನು ಮಾಡಿದ್ದೇನೆ ಎನ್ನುವುದು ಸುಳ್ಳು. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ರಾಜಕೀಯ ಪ್ರೇರಿತವಾದ ದೂರನ್ನು ಪಿರ್ಯಾದಿಯು ನೀಡಿದ ಮೇರೆಗೆ ಅದನ್ನು ಸರಿಯಾಗಿ ವಿಚಾರಣೆ ಮಾಡದೇ ಸುಳ್ಳು ದೋಷರೋಪಣೆ ಸಲ್ಲಿಸಿದ್ದೇನೆ ಎನ್ನುವುದು ಸುಳ್ಳು.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.